**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಲಯ, ರಾಣೇಬೆನ್ನೂರು.**

**Crl.Misc No. 317/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಯನ ಸಾಹುಕಾರ | ***P.W-1*** |
| ಗಂಡನ ಹೆಸರು | : | ಮಲ್ಲಿಕಾರ್ಜುನ್ | |
| ವಯಸ್ಸು | : | 26 ವರ್ಷ | |
| ಉದ್ಯೋಗ | : | ಮನೆಗೆಲಸ | |
| ವಾಸ | : | ಹೆಡಿಯಾಲ ತಾಃ ರಾಣೇಬೆನ್ನೂರು,<br>ಜಿಃ ಹಾವೇರಿ. | |

**ದಿನಾಂಕಃ 03-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರವಕೀಲರಿಂದಃ**

1. ನನ್ನ ಮತ್ತು ಎದುರುದಾರರ ವಿವಾಹ ದಿಃ 18-02-2024 ರಂದು ಬಾರಂಗಿಯ ಗ್ರಾಮದ ಎದುರುದಾರರ ಮನೆಯಲ್ಲಿ ನೆರವೇರಿರುತ್ತದೆ. ಮದುವೆಯ ಕಾಲಕ್ಕೆ ನನ್ನ ತವರು ಮನೆಯವರು 6 ತೊಲಾ ಬಂಗಾರ, 65 ಸಾವಿರ ರೂಪಾಯಿ ವರದಕ್ಷಿಣೆಯಾಗಿ ನೀಡಿ 20 ಸಾವಿರ ರೂಪಾಯಿಗಳನ್ನು ಬಾಂಡೆ ಸಾಮಾನು ಹಾಗೂ ಬಟ್ಟೆ ಬರಿಗಾಗಿ ಕೊಟ್ಟಿರುತ್ತಾರೆ. ಮದುವೆಯ ಕಾಲಕ್ಕೆ ಕಾಟು, ಬೀರು , ಫ್ರಿಜ್ ಇವುಗಳನ್ನು ಸಹ ನನ್ನ ತವರು ಮನೆಯವರು ಕೊಟ್ಟಿರುತ್ತಾರೆ. ಮದುವೆಯಾಗಿ 9 ದಿನಗಳ ನಂತರ ನಾನು ಎದುರುದಾರರ ಮನೆಗೆ ಬಾಳ್ವೆ ಮಾಡಲು ಹೋಗಿರುತ್ತೇನೆ. ಮದುವೆಯಾಗಿ ಒಂದು ತಿಂಗಳು ಮಾತ್ರ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು ನಂತರ ನನಗೆ ಚಿತ್ರಹಿಂಸೆ ನೀಡಲು ಪ್ರಾರಂಭಿಸಿರುತ್ತಾರೆ. ನಾನು ನಮ್ಮ ಮನೆಯ ಅಕ್ಕ ಪಕ್ಕದವರ ಜೊತೆಗೆ ಮಾತನಾಡಿದರೂ ಸಹ ಎದುರುದಾರರು ಅನುಮಾನ ಪಡುತ್ತಿದ್ದರು. ನನ್ನ ತಂದೆ ತಾಯಿಯ ಜೊತೆ ಮಾತನಾಡಿದರೂ ಸಹ ಅದಕ್ಕೆ ತಕರಾರು ಮಾಡುತ್ತಿದ್ದರು. ಮನೆಯಲ್ಲಿ ಜಗಳವಾದರೆ ಅಕ್ಕಪಕ್ಕ ದವರು ನೋಡುತ್ತಾರೆ ಎಂದು ನನ್ನನ್ನು ತೋಟಕ್ಕೆ ಕರೆದುಕೊಂಡು ಹೋಗಿ ನನಗೆ ಹೊಡೆದಿರುತ್ತಾರೆ. ಎದುರುದಾರರು, ಅವರ ತಂದೆ ಹಾಗೂ ಅಕ್ಕ ತಂಗಿ ಯರಾದ ಸುಜಾತ ಮತ್ತು ವೀಣಾ ರವರು ಸಹ ನನಗೆ ಹಲ್ಲೆ ಮಾಡುತ್ತಿದ್ದರು.

2. ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿ ಎದುರುದಾರರು ಮತ್ತು ಅವರ ಮನೆಯವರು ನನಗೆ ಹಲ್ಲೆ ಮಾಡುತ್ತಿದ್ದರು. ಪ್ರತಿಸಾರಿ ನಾನು ಹೊಂದಿಕೊಂಡು ಹೋಗಲು ಪ್ರಯತ್ನ ಪಟ್ಟಿರುತ್ತೇನೆ ನನ್ನ ತವರು ಮನೆಯವರು ಸಹ ಹಲವಾರು ಬಾರಿ ಪಂಚಾಯಿತಿಯನ್ನು ಸಹ ಮಾಡಿರುತ್ತಾರೆ ಆದರೆ ಎದುರುದಾರರು ಇದ್ಯಾವುದಕ್ಕೂ ಬೆಲೆ ಕೊಟ್ಟಿರುವುದಿಲ್ಲ. ನಮ್ಮ ಸಂಬಂಧಿಕರಾದ ಕರಿಬಸಪ್ಪ ನಾಗಪ್ಪ ಅರಳಿ , ನಾಗಪ್ಪ ಬಸಪ್ಪ ಅರಳಿ, ಶಂಕ್ರಪ್ಪ ಗೋಣೆಪ್ಪ ಹುಲಿಹಳ್ಳಿ ಹಾಗೂ ಸುರೇಶಪ್ಪ ಉಜ್ಜಪ್ಪ ಅರಳಿಯವರು ಸೇರಿ ಎದುರುದಾರರ ಮನೆಯಲ್ಲಿ ಪಂಚಾಯಿತಿ ಮಾಡಿದ್ದರು. ಪಂಚಾಯಿತಿ ಮಾಡಲು ಬಂದವರಿಗೆ ಎದುರುದಾರರು ಮತ್ತು ಅವರು ಮನೆಯವರು ಯಾವುದೆ ಬೆಲೆ ಕೊಟ್ಟಿರುವುದಿಲ್ಲ.

4. ಎದುರುದಾರರು ಯಾವಾಗಲೂ ತನ್ನ ತಾಯಿ ಸತ್ತು ತುಂಬಾ ದಿನ ಆಗಿಲ್ಲ, ಮನೆಯಲ್ಲಿ ಶುಭ ಕಾರ್ಯ ಆಗಬೇಕು ಎಂದು ನನ್ನನ್ನು ಮದುವೆಯಾಗಿದ್ದೇನೆ ಎಂದು ಹೇಳುತ್ತಿದ್ದರು. ಎದುರುದಾರರು ನನ್ನನ್ನು ಹೊಳೆ ಹತ್ತಿರ ಕರೆದುಕೊಂಡು ಹೋಗಿ ಪೂಜೆಯನ್ನು ಸಹ ಮಾಡಿಸಿದ್ದರು. ಎದುರುದಾರರು ತನ್ನ ತಾಯಿ ತೀರಿಕೊಂಡಿದ್ದು ಆ ಬಗ್ಗೆ ನನ್ನ ಬಳಿ ಪೂಜೆ ಮಾಡಿಸಿದ್ದರು. ನಾನು ತವರು ಮನೆಯವರ ಜೊತೆ ಫೋನ್ ನಲ್ಲಿ ಮಾತನಾಡುತ್ತಿದ್ದರೂ ಸಹ ಎದುರುದಾರರು ನನ್ನ ಜೊತೆಗೆ ಜಗಳ ಮಾಡುತ್ತಿದ್ದರು. ತವರು ಮನೆಯವರು ನನ್ನನ್ನು ನೋಡಲು ಬಂದರೂ ಸಹ ಎದುರುದಾರರು ನನ್ನ ಜೊತೆ ಜಗಳ ಮಾಡುತ್ತಿದ್ದರು. ನನಗೆ ಮೈ ಹುಷಾರಿಲ್ಲದೇ ಇದ್ದರೂ ಸಹ ನನ್ನನ್ನು ಸರಿಯಾದ ವೈದ್ಯರ ಬಳಿ ತೋರಿಸುತ್ತಿರಲಿಲ್ಲ, ನನ್ನ ತವರು ಮನೆಯವರೆ ಎಲ್ಲಾ ಖರ್ಚನ್ನು ಕೊಟ್ಟಿರುತ್ತಾರೆ. ನಾನು 4 ತಿಂಗಳು ಗರ್ಭಿಣಿ ಯಾಗಿದ್ದಾಗ ಎದುರುದಾರರು ನನ್ನನ್ನು ಸರಿಯಾಗಿ ಆಸ್ಪತ್ರೆಯಲ್ಲಿ ತೋರಿಸಿರುವುದಿಲ್ಲ ಮತ್ತು ನನಗೆ ಹಲ್ಲೆ ಮಾಡಿ ಮಾನಸಿಕ, ದೈಹಿಕ ಹಿಂಸೆ ಮಾಡಿದ್ದರಿಂದ ಅದು ಅಬಾರ್ಶನ್ ಆಗಿರುತ್ತದೆ. ಈ ಬಗ್ಗೆ ಬಾರಂಗಿ ಆಸ್ಪತ್ರೆಯಲ್ಲಿ ಮತ್ತು ಸುಣಕಲ್ ಬಿದರಿ ಆಸ್ಪತ್ರೆಯಲ್ಲಿ ನಾನು ತೋರಿಸಿರುತ್ತೇನೆ . ನಂತರ ದಾವಣಗೆರೆಯ ಎಸ್ ಎಸ್ ಐ ಆಸ್ಪತ್ರೆಯಲ್ಲೂ ಸಹ ತೋರಿಸಿರುತ್ತೇನೆ. ಆ ಬಗ್ಗೆ ದಾಖಲೆ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

3. ಎದುರುದಾರರು ನನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ಆನವಟ್ಟಿ ಪೋಲಿಸ್ ಠಾಣೆ ಮತ್ತು ಹಲಗೇರಿ ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ. ಆ ಬಗ್ಗೆ ದಾಖಲಾತಿ ಹಾಜರು ಪಡಿಸಿರುತ್ತೇನೆ. ಆನವಟ್ಟಿ ಪೋಲಿಸ್ ಠಾಣೆಯಲ್ಲಿ ನನ್ನ ದೂರನ್ನು ಸ್ವೀಕರಿಸದಂತೆ ಎದುರುದಾರರು ರಾಜಕೀಯ ಪ್ರಭಾವ ಬೀರಿರುತ್ತಾರೆ. ದಿಃ 26-01-2025 ರಂದು ನನ್ನನ್ನು

ಎದುರುದಾರರು ಹೊಡೆ ಬಡಿ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾರೆ ಅಲ್ಲಿಂದ ನಾನು ತವರು ಮನೆಗೆ ಬಂದಿರುತ್ತೇನೆ. ಮಾರನೇ ದಿನ ಎದುರುದಾರರು, ಅವರ ತಂದೆ ಮತ್ತು ಅಕ್ಕ ತಂಗಿಯರು, ಅವರ ಮಾವ ರಮೇಶ ನಮ್ಮ ಮನೆಗೆ ಬಂದು ಜಗಳ ಮಾಡಿರುತ್ತಾರೆ. ನಾನು ಎಷ್ಟೇ ಹೊಂದಿಕೊಂಡು ಹೋಗಬೇಕು ಎಂದರೂ ಸಹ ಎದುರುದಾರರು ನನ್ನ ಜೊತೆ ವಿನಾಃ ಕಾರಣ ಜಗಳ ತೆಗೆದು ಹಲ್ಲೆ ಮಾಡುತ್ತಿದ್ದರು. ನನ್ನ ಹೊಟ್ಟೆ ಬಟ್ಟೆ ಔಷಧಿ ಉಪಚಾರಕ್ಕೆ ತಿಂಗಳಿಗೆ ರೂ.20000/- ಜೀವನಾಂಶದ ಅವಶ್ಯಕತೆ ಇರುತ್ತದೆ. ಎದುರುದಾರರು ಆನವಟ್ಟಿ, ಎಣ್ಣೆಕೊಪ್ಪ ಮತ್ತು ಬಾರಂಗಿ ಆಸ್ಪತ್ರೆಗಳಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಾರೆ. ತಿಂಗಳಿಗೆ ಅವರಿಗೆ ರೂ.40 ಸಾವಿರ ಆದಾಯ ಬರುತ್ತದೆ. ಎದುರುದಾರರಿಗೆ ತೋಟ ಇದ್ದು, ಬೆಂಗಳೂರಿನಲ್ಲಿ ಮನೆ ಮತ್ತು ಸೈಟು ಇರುತ್ತವೆ. ಬಾರಂಗಿ ಗ್ರಾಮದಲ್ಲೂ ಸಹ ಮನೆ ಇರುತ್ತದೆ. ಆ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ಆಸ್ತಿಗಳಿಂದ ಎದುರುದಾರರಿಗೆ ವಾರ್ಷಿಕ 10 ರಿಂದ 15 ಲಕ್ಷ ಆದಾಯ ಬರುತ್ತದೆ. ಎದುರುದಾರರಿಂದ ತಿಂಗಳಿಗೆ ರೂ.20 ಸಾವಿರ ಜೀವನಾಂಶದ ಆದೇಶ ಮಾಡಬೇಕು ಎಂದು ನಾನು ಮಾನ್ಯ ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುತ್ತೇನೆ.

4. ನನ್ನ ಕೇಸ್ ಗೆ ಪೂರಕವಾಗಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿ ವಿವಾಹ ಆಮಂತ್ರಣ ಪತ್ರಿಕೆ ಹಾಗೂ ವಿವಾಹ ಸಮಯದಲ್ಲಿ ತೆಗೆದ ಭಾವಚಿತ್ರ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 3 ಎಂದು ಗುರುತಿಸಲಾಯಿತು. ಸಿ ಡಿಯನ್ನು ನಿಪಿ-4 ಎಂದು ಗುರುತಿಸಲಾಯಿತು. ಕಲಂ 63 ಬಿ ಎಸ್ ಎ ಅಡಿಯಲ್ಲಿ ಸರ್ಟಿಫಿಕೇಟ್ ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಹಲಗೇರಿ ಪೋಲಿಸರು ನೀಡಿದ ಸ್ವೀಕೃತಿಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆಧಾರ ಕಾರ್ಡನ ನೋಟರೈಜ್ಡ ಪ್ರತಿ,(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಯನ್ನು ನಿಪಿ-7 ಎಂದು, ಆನವಟ್ಟಿ ಪೋಲಿಸ್ ಠಾಣೆಗೆ ನೀಡಿದ ದೂರಿನ ಪ್ರತಿಯನ್ನು ನಿಪಿ-8 ಎಂದು, ಎದುರುದಾರರ ತಂದೆಯ ಹೆಸರಿನಲ್ಲಿರುವ 3 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-9 ರಿಂದ 11 ಎಂದು ಗುರುತಿಸಲಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ 3 ಒಪಿಡಿ ಅಸೆಸಮೆಂಟ್ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-12 ರಿಂದ 14 ಎಂದು ಗುರುತಿಸಲಾಯಿತು. 2 ಸ್ಕಾನಿಂಗ್ ರಿಪೋರ್ಟಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ಸ್ಕಾನಿಂಗ್ ನ ಛಾಯಾ ಪ್ರತಿಯನ್ನು ನಿಪಿ-17 ಎಂದು, ಪ್ರಯೋಗಾಲಯದ ವರದಿಯನ್ನು ನಿಪಿ-18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.